ಜಾಗದಲ್ಲಿ ಜಿಲ್ಲಾ ಪೊಲೀಸ್ ಕಛೇರಿ ಕಟ್ಟಡ ನಿರ್ಮಿಸುವ ವಿಚಾರ ಪರಿಶೀಲನೆಯಲ್ಲಿದೆ.

ಇ) ಜಿಲ್ಲಾ ಪೊಲೀಸ್ ಕಛೇರಿಯ ಕಟ್ಟಡವನ್ನು ನಿರ್ಮಾಣ ಮಾಡುವ ಬಗ್ಗೆ ಅನುದಾನ ಕಲ್ಪಿಸಿಕೊಂಡು ನಿರ್ಮಾಣ ಮಾಡುವ ಬಗ್ಗೆ ಪರಿಶೀಲಿಸಲಾಗುವುದು.

ಅಪರಾಧ ಕೃತಕಗಳ ಹೆಚ್ಚಳ

2258 (3166); ಶ್ರೀ ಚಲುವರಾಯಸ್ವಾಮಿ ಎನ್. (ನಾಗಮಂಗಲ)

ಅ) ಬೆಂಗಳೂರಿನಲ್ಲಿ 2013, 2014 ನೇ ಸಾಲಿನಲ್ಲಿ 2015 ಮೊದಲ ತ್ರೈಮಾಸಿಕ ಅವಧಿಯಲ್ಲಿ ನಡೆದಿರುವ ಕೊಲೆ, ದರೋಡೆ, ಸುಲಿಗೆ, ಅತ್ಯಾಚಾರ, ಗೂಂಡಾಗಿರಿ, ಅಪಹರಣ, ವಂಚನೆ, ಕಳ್ಳತನ, ಸರಗಳ್ಳತನ ಇತ್ಯಾದಿ ಪ್ರಕರಣಗಳ ಸಂಖ್ಯೆ ಎಷ್ಟು;

ಆ) ಬೆಂಗಳೂರಿನಲ್ಲಿ ಅಪರಾಧ ಕೃತ್ಯಗಳು ಹೆಚ್ಚಾಗುತ್ತಿರುವುದರಿಂದ ಸಾರ್ವಜನಿಕರ ನೆಮ್ಮದಿ ಹಾಳಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಈ ಅಪರಾಧ ಕೃತ್ಯಗಳನ್ನು ತಡೆಗಟ್ಟಲು ತೀವ್ರ ಕ್ರಮ ಕೈಗೊಳ್ಳಲಾಗುವುದೇ;

ಇ) ಬೆಂಗಳೂರು ಕಮೀಷನರೇಟ್ ವ್ಯಾಪ್ತಿಯಲ್ಲಿ ಮಂಜೂರಾಗಿರುವ ಹಾಲಿ ಸೇವೆ ಸಲ್ಲಿಸುತ್ತಿರುವ ಖಾಲಿ ಇರುವ ಎಲ್ಲಾ ಬಗೆಯ ಪೊಲೀಸ್ ಅಧಿಕಾರಿಗಳು ಮತ್ತು ಸಿಬ್ಬಂದಿಯ ಸಂಖ್ಯೆ ಎಷ್ಟು; ಬೆಂಗಳೂರು ಪೊಲೀಸ್‌ನ್ನು ಬಲಪಡಿಸುವ ಯಾವ ಯಾವ ಕಾರ್ಯಕ್ರಮಗಳನ್ನು ಹಾಕಿಕೊಳ್ಳಲಾಗಿದೆ;

ಶ್ರೀ ಕೆ.ಜೆ. ಜಾರ್ಜ್ (ಮಾನ್ಯ ಗೃಹ ಸಚಿವರು)

ಅ) ಬೆಂಗಳೂರಿನಲ್ಲಿ 2013, 2014 ನೇ ಸಾಲಿನಲ್ಲಿ 2015 ಮೊದಲ ತ್ರೈಮಾಸಿಕ ಅವಧಿಯಲ್ಲಿ ನಡೆದಿರುವ ಕೊಲೆ, ದರೋಡೆ, ಸುಲಿಗೆ, ಅತ್ಯಾಚಾರ, ಗೂಂಡಾಗಿರಿ, ಅಪಹರಣ, ವಂಚನೆ, ಕಳ್ಳತನ,

ಸರಗಳ್ಳತನ ಇತ್ಯಾದಿ ಪ್ರಕರಣಗಳ ಸಂಖ್ಯೆಗಳನ್ನು **ಅನುಬಂಧ–1** ರಲ್ಲಿ ಒದಗಿಸಿದೆ.

ಆ) ಅಪರಾಧ ಪ್ರಕರಣಗಳನ್ನು ತಡೆಗಟ್ಟಲು ಕೈಗೊಂಡ ಕ್ರಮಗಳು.

1) ಠಾಣಾ ಸರಹದ್ದಿನಲ್ಲಿ ಕಳ್ಳತನ ಪ್ರಕರಣಗಳನ್ನು ತಡೆಯುವ ಸಲುವಾಗಿ ಸರಹದ್ದಿನಲ್ಲಿ ರಾತ್ರಿ ಮತ್ತು ಬೆಳಗಿನ ಜಾವ ವಾಹನ ತಪಾಸಣೆಯನ್ನು ಮಾಡಲಾಗಿದೆ.

2) ಠಾಣಾ ಸರಹದ್ದಿನಲ್ಲಿ ಕಳ್ಳತನ ಪ್ರಕರಣಗಳು ಜರುಗದಂತೆ ಸೂಕ್ತ ಕ್ರಮ ಕೈಗೊಂಡು ಆಯಾಕಟ್ಟಿನ ಸ್ಥಳಗಳಲ್ಲಿ ಪೆಟ್ರೋಲಿಂಗ್ ಪಾಯಿಂಟ್‌ಗಳನ್ನು ನೇಮಕ ಮಾಡಲಾಗಿದೆ.

3) ಕಳ್ಳತನ ಪ್ರಕರಣಗಳು ಜರುಗದಂತೆ ಜನಸ್ನೇಹಿ ಪಾಯಿಂಟ್‌ಗಳನ್ನು ಗುರ್ತಿಸಿ ಸಿಬ್ಬಂದಿಗಳನ್ನು ನೇಮಕ ಮಾಡಲಾಗಿದೆ.

4) ಕಳ್ಳತನ ಪ್ರಕರಣಗಳು ಜರುಗದಂತೆ ಬೀಟು ಸಿಬ್ಬಂದಿಗಳಿಗೆ ಸೂಕ್ತ ತಿಳುವಳಿಕೆ ನೀಡಿ ಪರಿಣಾಮಕಾರಿಯಾಗಿ ಗಸ್ತು ಹೆಚ್ಚಿಸಲಾಗಿರುತ್ತದೆ.

5) ಕಳ್ಳತನ ಪ್ರಕರಣಗಳಲ್ಲಿನ ಎಂ.ಓ. ಆಸಾಮಿಗಳ ಬಗ್ಗೆ ಹಾಗೂ ಅಂತಹವರುಗಳ ಚಟುವಟಿಕೆಗಳ ಬಗ್ಗೆ ಸೂಕ್ತ ನಿಗಾವಣೆ ಇಡಲಾಗಿರುತ್ತದೆ.

6) ಜೈಲಿನಿಂದ ಬಿಡುಗಡೆಯಾಗುವಂತಹ ಎಂ.ಓ. ಆಸಾಮಿಗಳ ಪತ್ತೆಗೆ ಅಪರಾಧ ವಿಭಾಗದ ಸಿಬ್ಬಂದಿಗಳನ್ನು ನೇಮಕ ಮಾಡಲಾಗಿರುತ್ತದೆ.

7) ಠಾಣಾ ಸರಹದ್ದಿನಲ್ಲಿ ಹೊಯ್ಸಳ ಮತ್ತು ಚೀತಾಗಳನ್ನು ಆಯಾಕಟ್ಟಿನ ಸ್ಥಳಗಳಲ್ಲಿ ಝಡ್ ಮಾದರಿಯಲ್ಲಿ ಗಸ್ತು ನಡೆಸುವಂತೆ ನೇಮಿಸಲಾಗಿರುತ್ತದೆ

8) ಹಗಲು ಮತ್ತು ರಾತ್ರಿ ವೇಳೆಯಲ್ಲಿ ಅಪರಾಧ ವಿಭಾಗದ ಸಿಬ್ಬಂದಿಗಳಿಗೆ ಹಾಗೂ ಬೀಟು ಸಿಬ್ಬಂದಿಗಳಿಗೆ ಪಾಯಿಂಟ್‌ಗಳಿಗೆ ನೇಮಿಸಲಾಗಿದೆ.

9) ಅನುಮಾನಾಸ್ಪದವಾಗಿ ಚಲಿಸುವಂತಹ ದ್ವಿಚಕ್ರವಾಹನಗಳ ಬಗ್ಗೆ ನಿಗಾ ಇಡಲಾಗಿದ್ದು, ಅಂತಹ ವಾಹನಗಳನ್ನು ಚೆಕ್ ಮಾಡಲಾಗಿದೆ.

10) ಪ್ರಕರಣಗಳು ವರದಿಯಾದ ಕೂಡಲೇ ಪ್ರಕರಣವನ್ನು ದಾಖಲು ಮಾಡಿ, ನಿಸ್ತಂತು ಮೂಲಕ ಸಂದೇಶವನ್ನು ನೀಡಿ. ಆರೋಪಿಗಳ ಪತ್ತೆಗಾಗಿ ಸೂಕ್ತ ಕ್ರಮಕೈಗೊಳ್ಳಲಾಗಿದೆ.

ಇ) ಬೆಂಗಳೂರು ಕಮೀಷನರೇಟ್ ವ್ಯಾಪ್ತಿಯಲ್ಲಿ ಮಂಜೂರಾಗಿರುವ ಹಾಲಿ ಸೇವೆ ಸಲ್ಲಿಸುತ್ತಿರುವ ಖಾಲಿ ಇರುವ ಎಲ್ಲಾ ಬಗೆಯ ಪೊಲೀಸ್ ಅಧಿಕಾರಿಗಳು ಮತ್ತು ಸಿಬ್ಬಂದಿ ಬಲಾಬಲವನ್ನು **ಅನುಬಂಧ–2** ರಲ್ಲಿ ಒದಗಿಸಿದೆ.

ಪಶ್ನೆ ಸಂಖ್ಯೆ: 3665 ಅನುಬಂಧ-1

ಕ್ರ.ಸಂ	ವಿವರ	ವರ್ಷ		
		2013	2014	2015 ಮೇಯಲು ತ್ರೈಮಾಸಿಕ ಅವಧಿ
1	ಕೊಲೆ	217	246	59
2	ದರೋಡೆ	40	512	14
3	ಸುಲಿಗೆ	290	538	114
4	ಅತ್ಯಾಚಾರ	80	116	44
5	ಗುಂಡಾಗಿರಿ.	9	19	5
6	ಅಪಹರಣ	642	708	190
7	ವಂಚನೆ	133	107	824
8	ಕಳ್ಳತನ	12047	13002	3108
9	ಸರಗಳ್ಳತನ	340	528	99

ಪ್ರಶ್ನೆ ಸಂಖ್ಯೆ: 3166ರ ಅನುಬಂಧ-2

ಬೆಂಗಳೂರು ಕಮೀಷನರೇಟ್ ವ್ಯಾಪ್ತಿಯಲ್ಲಿ ಮಂಜೂರಾಗಿರುವ, ಹಾಲಿ ಸೇವೆ ಸಲ್ಲಿಸುತ್ತಿರುವ, ಖಾಲಿ ಇರುವ ಎಲ್ಲಾ ಬಗೆಯ ಪೊಲೀಸ್ ಅಧಿಕಾರಿಗಳು ಮತ್ತು ಸಿಬ್ಬಂದಿಯ ಒಟ್ಟು ಸಂಖ್ಯೆ ಈ ಕೆಳಕಂಡಂತೆ ಇರುತ್ತದೆ.

ಕ್ರಮ ಸಂ.	ಹುದ್ದೆಗಳ ವಿವರ	ಮಂಜೂರಾತಿ ಬಲ	ಹಾಲಿ ಬಲ	ರಿಕ್ತ ಸ್ಥಾನ
1	ಸಿಪಿ	1	1	0
2.	ಅಪರ ಸಿಪಿ	4	4	0
3	ಜಂಟಿ ಸಿಪಿ	4	2	2
4	ಡಿಸಿಪಿ	16	15	1
5	ಎಸಿಪಿ	48	30	18
6	ಪಿಐ	202	193	9
7	ಪಿಎಸ್‌ಐ	841	481	360
8	ಎಎಸ್‌ಐ	1316	1205	111
9	ಸಿಎಚ್‌ಸಿ	3380	3001	379
10	ಸಿಪಿಸಿ	8942	6042	2900
	ಒಟ್ಟು	14754	10974	3780

ಕ್ರಮ ಸಂ.	ಹುದ್ದೆಗಳ ವಿವರ	ಮಂಜೂರಾತಿ ಬಲ	ಹಾಲಿ ಬಲ	ರಿಕ್ತ ಸ್ಥಾನ
1	ಆರ್‌ಪಿಐ	3	0	3
2	ಆರ್‌ಎಸ್‌ಐ	37	17	20
3	ಎಆರ್‌ಎಸ್‌ಐ	41	29	12
4	ಎಹೆಚ್‌ಸಿ	66	53	13
5	ಎಪಿಸಿ	161	70	91
6	ಎಪಿಸಿ(ಆರ್ಡರ್ಲಿ)	2	0	2
7	ಡಿಹೆಚ್‌ಸಿ	13	11	2
8	ಡಿಪಿಸಿ	21	1	20
	ಒಟ್ಟು	344	181	163

ಬೆಂಗಳೂರು ನಗರ,ನಿಸ್ತಂತು ಸಿಬ್ಬಂದಿಗಳ ಬಲ				
ಕ್ರಮ ಸಂ.	ಹುದ್ದೆಗಳವಿವರ	ಮಂಜೂರಾತಿ ಬಲ	ಹಾಲಿ ಬಲ	ರಿಕ್ತ ಸ್ಥಾನ
1	ಎಸಿಪಿ(ನಿ)	1	1	0
2	ಪಿಐ	1	1	0
3	ಪಿಎಸ್‌ಐ	6	3	3
4	ಎಎಸ್‌ಐ	26	20	6
5	ಹೆಚ್‌ಸಿ	11	5	6
6	"	30	11	19
	ಒಟ್ಟು	77	41	36

ಎಫ್.ಟಿ.ಪಿ, ಬೆಂಗಳೂರು ನಗರ ಸಿಬ್ಬಂದಿಗಳ ಬಲ				
ಕ್ರ. ಸಂ.	ಹುದ್ದೆಗಳು	ಮಂಜೂರಾತಿ ಬಲ	ಹಾಲಿ ಬಲ	ರಿಕ್ತ ಸ್ಥಾನ
1	ಎಸಿಪಿ	1	1	0
2	ಪಿಐ	2	2	0
3	ಪಿಎಸ್‌ಐ	2	0	2
4	ಹೆಚ್‌ಸಿ	2	2	0
5	ಪಿಸಿ	4	4	0
ಒಟ್ಟು		11	9	2

ನಗರ ಸಭೆಯ ಮೀಸಲು ಪಡೆ

ಕ್ರ. ಸಂ.	ಪುಲ್ಲಗಳ ವಿವರ	ಮಂಜೂರಾತಿ ಬಲ	ಹಾಲಿ ಬಲ	ರಿಕ್ತ ಸಾನ
1	ಡಿ.ಸಿ.ಪಿ.	3	3	0
2	ಎ.ಸಿ.ಪಿ.	14	14	0
3	ಆರ್.ಪಿ.ಐ.	25	11	14
4	ಆರ್.ಎಸ್.ಐ.	74	25	49
5	ಎ.ಆರ್.ಎಸ್.ಐ.	135	113	22
6	ಪಿಹೆಚ್‌ಸಿ	1192	1140	52
7	ಎಹೆಸಿ	2939	2366	573
	ಒಟ್ಟು	4382	3672	710